ಮುಂದೆ ಮನೆಯಿಂದ ಚಿಲ್ಲರೆ ಎಗರಿಸಿ ಬಾಡಿಗೆ ಸೈಕಲ್ ಪ್ರಯೋಗ ಮುಂದುವರೆಸಿದೆ.

ಶಾಪಿನವರು ಒಳಪೆಟ್ಲಿನವರಿಗೆ ಸುಲಭವಾಗಿ ಬಾಡಿಗೆಗೆ ಕೊಡುವುದಿಲ್ಲ. ಬೇಲಿ ನುಗ್ಗಿಸುವುದರಲ್ಲಿ ನಾವು ಪರಿಣತರೆಂದು ಅವರು ಬಲ್ಲರು. ಹೋಗುವಾಗ ಚೆನ್ನಾಗಿರುವ ಸೈಕಲ್ಲು ಬರುವಾಗ ಹುಚ್ಚರ ದಿರಿಸಿನಂತೆ ಬದಲಾವಣೆ ಪಡೆಯುತ್ತಿತ್ತು. ಜಾರಿದ ಚೈನು, ಡೊಂಕಾದ ಚಕ್ರ, ಮುರಿದ ಸ್ಟ್ಯಾಂಡು, ತರಿದಮೈ, ದಿಕ್ಕೆಟ್ಟ ಸೀಟು, ಪಂಕ್ಚರಾದ ಗಾಲಿ; ಕೆಲವೊಮ್ಮೆ ಅಂಗಾಂಗಳೇ ಮಾಯ. ಹೀಗಾಗಿ ಶಾಪಿನವರು ಯಾರಾದರೂ ದೊಡ್ಡವರು ಜಾಮೀನು ನೀಡಿದರಷ್ಟೇ ಬಾಡಿಗೆ ಕೊಡುತ್ತಿದ್ದರು. ನಮ್ಮಂಥವರಿಗಾಗಿ ಸಾಧ್ಯವಾದಷ್ಟೂ ಅವರು ಮುರುಕು ಗಾಡಿಯನ್ನೇ ಮೀಸಲಿಡುತ್ತಿದ್ದರು. ಸದರಿ ಮೀಸಲು ಬಂಡಿ ಬಾಡಿಗೆಗೆ ಹೋಗಿದ್ದರೆ, ಬರುವ ತನಕ ಕಾಯಬೇಕಿತ್ತು. ಕಾಯವುದು ನಮಗೆಂದೂ ಬೇಸರ ತರುತ್ತಿರಲಿಲ್ಲ. ಚಕ್ರದ ಕಡ್ಡಿಗಳ ಬೆಂಡು ತೆಗೆಯುವುದು, ಬ್ರೇಕು ಬಿಗಿಗೊಳಿಸುವುದು, ಚೈನಿಗೆ ತೈಲೋಪಚಾರ ಇತ್ಯಾದಿ ರೋಚಕ ದೃಶ್ಯಗಳು ಶಾಪಿನಲ್ಲಿರುತ್ತಿದ್ದವು. ಪಂಕ್ಚರ್ ಹಾಕುವುದಂತೂ ಅಪೂರ್ವ ಕಲೆ. ಟೈರಿನೊಳಗಿಂದ ಸತ್ತ ಹಾವಂತಿರುವ ಟ್ಯೂಬನ್ನು ಹೊರಗೆಳೆದು, ಹವಾ ಹೊಡೆದು ಉಬ್ಬಿಸಿ, ನೀರಲ್ಲಿ ಮುಳುಗಿಸಿ, ಛಿದ್ರಸ್ಥಳವನ್ನು ಗುರುತಿಸಿ ಕಡ್ಡಿಚುಚ್ಚಿ, ಉಪ್ಪುಕಾಗದದಲ್ಲಿ ಅದನ್ನುಜ್ಜಿ, ಜೇನುತುಪ್ಪದಂತಹ ಲೋಳೆಯನ್ನು ಲೇಪಿಸಿ, ಹರಿದ ಟ್ಯೂಬಿನಿಂದ ಬಿಲ್ಲೆಯಾಕಾರದಲ್ಲಿ ಚರ್ಮ ಕತ್ತರಿಸಿ ಹಚ್ಚಿ, ಕುಟ್ಟಿ ಮತ್ತೆ ಟೈರಿನೊಳಗೆ ಸೇರಿಸಿ ಉಸಿರು ತುಂಬುವುದು, ಒಂದು ಮಾಟದ ಆಚರಣೆಯಂತೆ ತೋರುತ್ತಿತ್ತು. ಶಾಪಿಗನು ಮೃತದೇಹಕ್ಕೆ ಮರುಜೀವ ಕೊಡುವ ಮಾಟಗಾರನಂತೆ ತೋರುತ್ತಿದ್ದನು. ಆಗೆಲ್ಲ ನಾವು ಕಾಣುತ್ತಿದ್ದ ದೊಡ್ಡ ಕನಸೆಂದರೆ– ಸೈಕಲ್‌ಶಾಪಿನ ಮಾಲೀಕನಾಗುವುದು; ಜಾಮೀನಿಲ್ಲದೆಯೂ ಮಕ್ಕಳಿಗೆ ಸೈಕಲ್ ಬಾಡಿಗೆಗೆ ನೀಡುವುದು. ಮನೆಗೆ ಬರುವ ಗರಜಿಲ್ಲದೆ ಗೆಳೆಯರೊಟ್ಟಿಗೆ ಹಗಲೂರಾತ್ರಿ ಸೈಕಲ್ ಹೊಡೆಯುತ್ತ ಊರನ್ನು ಅಲೆಯುವುದು.

ನನ್ನ ಸೈಕಲ್ ಹುಚ್ಚಿಗಾಗಿಯೊ, ಹೈಸ್ಕೂಲು ಪಾಸು ಮಾಡಿದೆನೆಂದೊ ಅಪ್ಪ ಒಂದು ಸೆಕೆಂಡ್‌ಹ್ಯಾಂಡ್ ಗಾಡಿಯನ್ನು ಕೊಡಿಸಿದನು. ವಂಶದಲ್ಲೇ ಕಾಲೇಜು ಮೆಟ್ಟಿಲು ಹತ್ತಿದ ಪ್ರಥಮ ಕುಡಿಗೆ ಸಂದ ಉಡುಗೊರೆಯದು. ಆದರೆ ಅದು ಮಹಾ ತರಲೆಯಾಗಿತ್ತು. ಚೈನು ಚರಕ್‌ಪರಕ್ ಎಂದು ಲಯಬದ್ಧ ಸಂಗೀತ ಹೊರಡಿಸುತ್ತಿತ್ತು; ನಡುರಸ್ತೆಯಲ್ಲಿ ಕಳಚಿಬಿದ್ದ ಚೈನನ್ನು ಕಡ್ಡಿಯ ಮೂಲಕ ಹಲ್ಲುಚಕ್ರಕ್ಕೆ ಸಿಗಿಸಬೇಕಿತ್ತು. ಕಿರಿಕ್ಕುಗಳಿಲ್ಲದೆ ಹಕ್ಕಿಯಂತೆ ಹಾರುವ ಹೊಸವಾಹನದ ಒಡೆಯನಾಗುವ ಹಂಬಲ ಈಡೇರಲು ನೌಕರಿ ಸಿಗುವ ತನಕ ಕಾಯಬೇಕಾಯಿತು. ಪಹಿಲಾ ಪಗಾರ ಪಡೆದವನೇ, ಬ್ಯಾಂಕಿನಿಂದ ನೇರ ಶಿವಪ್ಪನಾಯಕ ಸೈಕಲ್‌ಮಾರ್ಟಿಗೆ ಹೋಗಿ, ಅಟ್ಲಾಸನ್ನು ಫಿಟ್‌ಮಾಡಿಸಿದೆ. ವರ್ಷದ ತನಕ ದೂಳಿಲ್ಲದಿದ್ದರೂ ಒರೆಸುತ್ತ ದಿನವೂ ಅದರ ಷೋಡಷೋಪಚಾರ ಮಾಡುತ್ತಿದ್ದೆ. ಅಧ್ಯಾಪಕರು ಕಾಲೇಜಿಗೆ ಸೈಕಲ್ಲಿನಲ್ಲಿ ಹೋಗುವುದು ಆಗಿನ್ನೂ ಅಪಮಾನದ ಸಂಗತಿಯಾಗಿರಲಿಲ್ಲ. ಆದರೂ ವಿದ್ಯಾರ್ಥಿಗಳಂತೆ ಸೈಕಲ್ಲಿನಲ್ಲಿ ಆಟವಾಡಿಕೊಂಡು ಬರುವುದು ಸಾಧ್ಯವಿರಲಿಲ್ಲ. ಅಧ್ಯಾಪಕನಾಗಿ ಗಂಭೀರ ವರ್ತನೆ ತೋರಬೇಕಿತ್ತು. ವಯಸ್ಸು, ವೃತ್ತಿ ನಮ್ಮ ಚೆಲ್ಲಾಟದ ಹಕ್ಕನ್ನು ಕಸಿಯುತ್ತವೆ. ಎಂತಲೇ ನನಗೆ ಪರಿಚಯವಿಲ್ಲದ ಜಾಗದಲ್ಲಿ ನಿರ್ಜನ ರಸ್ತೆಯಲ್ಲಿ ಮನಸೀಯಿಚ್ಛೆಯಿಂದ ಸೈಕಲ್ ಚಲಾಯಿಸುವುದಕ್ಕೆ ನಾನು ಬಯಸುತ್ತೇನೆ. ಕೊಡೈಕೆನಾಲಿನಲ್ಲಿ ಸರೋವರದ ಅಂಚಿಗೇ ಇರುವ ಸುತ್ತುರಸ್ತೆಯಲ್ಲಿ ಸೈಕಲ್ ಚಲಾಯಿಸುವುದು ನನಗೆ ಖುಶಿ ಕೊಡುತ್ತದೆ.